ನೋಟ-೨

# ಪಶ್ಚಿಮ ಘಟ್ಟಗಳನ್ನು ಉಳಿಸಿ ಇಲ್ಲವೇ ಮತ್ತಷ್ಟು ವಿಪತ್ತುಗಳಿಗೆ ಸಿದ್ಧರಾಗಿ!

–ಡಾ. ಟಿ.ವಿ. ರಾಮಚಂದ್ರ

ಈ ಜಗತ್ತನ್ನು ಸೃಷ್ಟಿಸಿದವನು ಮನುಷ್ಯನಲ್ಲ. ಆದ್ದರಿಂದ ಅದರೊಡನೆಯ ಅವನ ಒಡನಾಟದ ರೀತಿನೀತಿಗಳನ್ನು ಅದು ಹೇಳುವ ಪಾಠಗಳಿಂದಲೇ ಕಲಿಯಬೇಕು. ಈ ನಮ್ರತೆಯ ತಿಳುವಳಿಕೆಯನ್ನು ಮರೆತ ಮನುಷ್ಯ ಈ ಪ್ರಕೃತಿಯನ್ನು ತನಗೆ ಬೇಕಾದಂತೆ-ತನ್ನ ಮಿತಿಯಿಲ್ಲದ ಸುಖ ಸೌಲಭ್ಯಗಳಿಗಾಗಿ-ಸೂರೆ ಮಾಡತೊಡಗಿದ ಪರಿಣಾಮಗಳೇ ಇಂದಿನ ಹವಾಮಾನ ವೈಪರೀತ್ಯ-ನೈಸರ್ಗಿಕ ಆಪತ್ತುಗಳು. ಈ ಸತ್ಯವನ್ನು ಇಲ್ಲಿ ಲೇಖಕರು ಭಾರತದ ಜೀವಕೇಂದ್ರವೆಂದೇ ಗುರುತಿಸಲಾಗಿರುವ ಪಶ್ಚಿಮಘಟ್ಟಗಳ ಸಂರಕ್ಷಣೆಯ ಅಗತ್ಯವನ್ನು ವೈಜ್ಞಾನಿಕ ಅಂಶಗಳೊಂದಿಗೆ ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.-**ಸಂ.**



**ಲ**ಕ್ಷಾಂತರ ವರ್ಷಗಳ ಹಿಂದೆ, ಭೂಮಿಯ ಮೇಲೆ ಜೀವೋತ್ಪತ್ತಿಗೆ ಕಾರಣವಾಗಿದ್ದು ಜಗತ್ತಿನ ಮೂಲಭೂತ ಧಾತುಗಳಲ್ಲೊಂದಾದ ನೀರು.

ಏಕಕೋಶಜೀವಿಗಳಿಂದ ಹಿಡಿದು ತಿಮಿಂಗಿಲಗಳಂತಹ ಬೃಹತ್ ಪ್ರಾಣಿಯವರೆಗೆ ಹಲವಾರು ಜೀವಪ್ರಬೇಧಗಳನ್ನು ಪೋಷಿಸುವ ನೀರು ಎಲ್ಲ ಜೀವಿಗಳಿಗೂ ಅನಿವಾರ್ಯ. ಮಾನವನ ವಿಕಾಸವಾದಂತೆ ಅವನು ನದಿಗಳ ದಂಡೆಗಳ ಫಲವತ್ತಾದ ಪ್ರದೇಶಗಳಲ್ಲಿ ನೆಲೆಸ ತೊಡಗಿದ, ಆದ್ದರಿಂದಲೇ ನದಿ ಪಾತ್ರಗಳನ್ನು ಮಾನವ ನಾಗರೀಕತೆಯ ತೊಟ್ಟಿಲು ಎನ್ನಲಾಗುತ್ತದೆ.

ಈ ನದಿ ಅಥವಾ ಸರೋವರಗಳು ಕುಡಿಯುವ ನೀರು ಮತ್ತು ಕೃಷಿಗೆ ಬೇಕಾದ ಖನಿಜಯುಕ್ತ ಫಲವತ್ತಾದ ಮಣ್ಣನ್ನು ಒದಗಿಸುತ್ತಿದ್ದವು. ಯಾವುದೇ ಒಂದು ಪ್ರಾಂತ್ಯದ ಸುಸ್ಥಿರ ಅಭಿವೃದ್ಧಿಯಲ್ಲಿ ಸಾಕಷ್ಟು ಪ್ರಮಾಣದ ಶುದ್ಧವಾದ ನೀರು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ.

ಪಶ್ಚಿಮ ಘಟ್ಟಗಳು ನಿರಂತರ ಹರಿಯುವ ಹಲವಾರು ನದಿಗಳನ್ನು ಪೋಷಿಸುತ್ತ ಆಹಾರ ಮತ್ತು ನೀರಿನ ಭದ್ರತೆಯನ್ನು ಒದಗಿಸುವ ಕಾರಣದಿಂದ ಅವನ್ನು ಭಾರತ ಪರ್ಯಾಯ ದ್ವೀಪದ ನೀರಿನ ಟ್ಯಾಂಕ್ ಎಂದು ಕರೆಯಲಾಗುತ್ತದೆ. ಭಾರತದ ಪಶ್ಚಿಮಕ್ಕೆ ಸುಮಾರು ೧೬೦೦ ಕಿ, ಮೀ. ಉದ್ದಕ್ಕೆ ಅಲೆಅಲೆಯಾಗಿ ಹಬ್ಬಿರುವ ಈ ಶ್ರೇಣಿಯು ಅರಬ್ಬಿ ಸಮುದ್ರಕ್ಕೆ ಸಮಾನಾಂತರವಾಗಿ ಪಶ್ಚಿಮ ಕರಾವಳಿಯಲ್ಲಿ ಗುಜರಾತ್‌ನ ದಕ್ಷಿಣದಿಂದ ಪ್ರಾರಂಭವಾಗಿ ಪರ್ಯಾಯ ದ್ವೀಪದ ದಕ್ಷಿಣದ ತುದಿಯವರೆಗೂ ಚಾಚಿದೆ. ಇದು ಹಬ್ಬಿರುವ ಪ್ರದೇಶದ ವ್ಯಾಪ್ತಿ ೧,೬೪,೨೮೦ ಚ ಕಿ, ಮೀ,( ಅಂದರೆ ಭಾರತದ ವಿಸ್ತೀರ್ಣದ ೫% ಗಿಂತಲೂ ಅಧಿಕ.) ಈ ಶ್ರೇಣಿಯು ಕೇರಳದ ಪಾಲ್ಘಾಟ್ ಪ್ರದೇಶದಲ್ಲಿ ೩೦ ಕಿ, ಮೀ, ದೂರದ ಒಂದು ತೆರವನ್ನು ಹೊಂದಿದೆ. ಪಶ್ಚಿಮ ಘಟ್ಟಗಳ ಸರಾಸರಿ ಎತ್ತರ ೯೦೦ ಮೀಟರ್‌ಗಳಾದರೆ ಹಲವಾರು ಶಿಖರಗಳು ೧೦೦೦ ಮೀಟರ್‌ಗೂ ಅಧಿಕ ಎತ್ತರವಾಗಿವೆ. ಪಾಲ್ಘಾಟ್‌ನ ಉತ್ತರಕ್ಕಿರುವ ನೀಲಗಿರಿ ಪ್ರಸ್ಥಭೂಮಿ ಮತ್ತು ದಕ್ಷಿಣಕ್ಕಿರುವ ಅಣ್ಣಾಮಲೈ ಶ್ರೇಣಿಗಳು ಹಲವು ಕಡೆ ೨೦೦೦ ಮೀ ಎತ್ತರವನ್ನು ಮೀರುತ್ತವೆ.

ಈ ಶ್ರೇಣಿಯ ಪೂರ್ವ ಭಾಗವು ದಕ್ಷಿಣ ಪ್ರಸ್ಥಭೂಮಿಯ ಜೊತೆಗೆ ಒತ್ತಿಕೊಳ್ಳುತ್ತಾ ಪೂರ್ವದ ಬಂಗಾಳ ಕೊಲ್ಲಿಯ ಕಡೆಗೆ ಚಾಚಿಕೊಳ್ಳುತ್ತದೆ. ಈ ಪ್ರದೇಶವು ಅರಬ್ಬೀ ಸಮುದ್ರದ ಕಡೆಗೆ ಭೋರ್ಗರೆದು ಹರಿಯುವ (ನೇತ್ರಾವತಿ, ಶರಾವತಿ, ಕಾಳಿ ಮುಂತಾದ ಹಲವಾರು ನದಿ–ತೊರೆಗಳ ಜನ್ಮ ಸ್ಥಳವಾಗಿದೆ. ಹಾಗೆಯೇ ಇಲ್ಲಿ ಉಗಮಿಸಿ ಪೂರ್ವಕ್ಕೆ ಹರಿಯುತ್ತಾ ತಮ್ಮ ಪಾತ್ರದುದ್ದಕ್ಕೂ ಇತರ ಹಲವಾರು ನದಿಗಳನ್ನು ತಮ್ಮೊಡನೆ ಸಂಗಮಿಸಿಕೊಂಡು ಬಂಗಾಳ ಕೊಲ್ಲಿಯನ್ನು ಸೇರುವ (ಗೋದಾವರಿ, ಕೃಷ್ಣಾ, ಕಾವೇರಿ ಎಂಬ) ಮೂರು ಪ್ರಮುಖ ನದಿಗಳೂ ಇವೆ.. ಈ ನದಿಗಳು ದಕ್ಷಿಣ ಭಾರತದ ಮುಖ್ಯ ಜಲಮೂಲಗಳಾಗಿವೆ. ಇದರ ಸಂಕೀರ್ಣವಾದ ಭೂ ಪ್ರದೇಶ, ಎತ್ತರದಲ್ಲಿಯ ವ್ಯತ್ಯಾಸಗಳು, ವಿಭಿನ್ನವಾದ ಭೂಸ್ವರೂಪ, ಶಿಲಾ ರಚನೆ, ೧೦೦೦ ಮಿ.ಮೀ ನಿಂದ ಹಿಡಿದು ೬೦೦೦ ಮಿ, ಮೀ ವರೆಗೆ ಮಳೆಯಲ್ಲಿನ ವ್ಯತ್ಯಾಸ, ಇವುಗಳ ಕಾರಣದಿಂದ ಪಶ್ಚಿಮ ಘಟ್ಟಗಳು ಅಪಾರವಾದ ಸಸ್ಯವೈವಿಧ್ಯತೆಯ ತಾಣಗಳಾಗಿವೆ. ಉಷ್ಣಪ್ರದೇಶದ ನಿತ್ಯಹರಿದ್ವರ್ಣ ಕಾಡುಗಳು ಪಶ್ಚಿಮ ಇಳಿಜಾರಿನ ಪ್ರಾಕೃತಿಕ ಶಿಖರ ಸಸ್ಯಸಂಕುಲ(climax vegetation) ಆಗಿದ್ದು ಈ ಕಾಡುಗಳು ನೈರುತ್ಯ ಮಳೆ ಮಾರುತಗಳನ್ನು ತಡೆಯುತ್ತವೆ. ಇಲ್ಲಿಯ ಸಸ್ಯಸಂಕುಲ ಅರೆ ನಿತ್ಯ ಹರಿದ್ವರ್ಣದಿಂದ, ಅತ್ಯಂತ ಎಲೆ ಉದುರುವ ತೇವಯುಕ್ತ ಕಾಡಿನಿಂದ ತನ್ನ ಪೂರ್ವಭಾಗಗಳ ಎಲೆ ಉದುರುವ ಶುಷ್ಕ ಕಾಡುಗಳವರೆಗೆ, ಅಲ್ಲಿಂದ ಮಳೆ ನೆರಳಿನ (Rain shadow) ಪ್ರದೇಶಗಳವರೆಗೆ ಚಾಚಿ ನಂತರ ಶುಷ್ಕ ಡೆಕ್ಕನ್ ಪ್ರಾಂತ್ಯದ ಅರೆ ಒಣಪ್ರಾಂತ್ಯದ ವಿಶಿಷ್ಟ ಪ್ರದೇಶಗಳವರೆಗೆ ವಿಸ್ತರಿಸುತ್ತದೆ. ಈ ಸೂಕ್ಷ್ಮ ಜೀವಿಪರಿಸ್ಥಿತಿ ಜೀವಾವಾರವನ್ನು(biosphere) ಪೋಷಿಸುತ್ತದೆ ಮತ್ತು ಜೀವಸತ್ವ ಆವರ್ತನೆಯಿಂದ (nutrient cycling) ಹಿಡಿದು ಬಯೋಜಿಯೋ ಕೆಮಿಕಲ್ ಸೈಕಲ್, ಹೈಡ್ರೋ ಸ್ಯಕ್ಲಿಂಗ್ ಮುಂತಾದ ವಿವಿಧ ಲಕ್ಷಣಗಳನ್ನು ಹೊಂದಿದೆ. ಪ್ರಾಕೃತಿಕ ಭೂಪ್ರದೇಶಗಳ ಲಕ್ಷಣಗಳನ್ನೇ ಬದಲಾಯಿಸುವಷ್ಟು ಪ್ರಬಲವಾಗಿರುವ ಪಾರಿಸರಿಕ ಕ್ಷೋಭೆಗಳನ್ನು (disturbance) ನಿಭಾಯಿಸುವ ಸಾಮರ್ಥ್ಯವನ್ನು ಒಂದು ಜೀವಿಪರಿಸರದ ಜೀವಿಪರಿಸರಸೂಕ್ಷ್ಮತೆ ಎಂದು ಕರೆಯಲಾಗುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಮನುಷ್ಯಮೂಲದ ಚಟುವಟಿಕೆಗಳಿಂದಾಗಿ ಜೀವ ವೈವಿಧ್ಯದ ಪ್ರಮುಖ ತಾಣಗಳು, ಜೈವಿಕ ಸಮುದಾಯಗಳು ತಮ್ಮ ಮೂಲ ಸ್ಥಿತಿಗೆ ಬರಲು ಸಾಧ್ಯವೇ ಆಗದಷ್ಟು ಮಟ್ಟಿಗಿನ ಬದಲಾವಣೆಗೆ ಒಳಗಾಗುತ್ತಿವೆ.

ಜಗತ್ತಿನ ಪ್ರಮುಖ ೩೫ ಜೀವಿವೈವಿಧ್ಯದ ತಾಣಗಳ ಪೈಕಿ ಪಶ್ಚಿಮಘಟ್ಟವೂ ಒಂದು. ಇದು ಅತಿ ವಿಶೇಷವಾದ ಹಲವು ಸಸ್ಯ, ಮತ್ತು ಪ್ರಾಣಿಸಂಕುಲಗಳ ತಾಣ. ಇಲ್ಲಿನ ೪೬೦೦ ಹೂ ಬಿಡುವ ಸಸ್ಯಗಳ ಪೈಕಿ ಶೇ. ೩೮ ಸ್ಥಳವಿಶಿಷ್ಟವಾದಂಥವು (endemic). ಇಲ್ಲಿ ೩೩೦ ಬಗೆಯ ಚಿಟ್ಟೆಗಳಿದ್ದು ಅವುಗಳಲ್ಲಿ ೧೧%, ೧೯೭ ಜಾತಿಯ ಹಾವುಗಳಲ್ಲಿ ಶೇ.೫೨, ೫೮೯ ಜಾತಿಯ ಹಕ್ಕಿಗಳ ಪೈಕಿ ಶೇ.೪೫, ೧೬೧ ಜಾತಿಯ ಸಸ್ತನಿಗಳು ಇದ್ದು ಅವುಗಳಲ್ಲಿ ಶೇ. ೯, ೩೪೩ ಜಾತಿಯ ಮೀನುಗಳಲ್ಲಿ ಶೇ. ೩೧, ೨೪೮ ಜಾತಿ ಉಭಯವಾಸಿಗಳಿದ್ದು ಶೇ. ೬೨ ಸ್ಥಳವಿಶಿಷ್ಟವಾದವುಗಳಾಗಿವೆ. ಉತ್ತರಕ್ಕೆ ಚಲಿಸಿದಂತೆ ಪಶ್ಚಿಮ ಘಟ್ಟಗಳಲ್ಲಿ ಸ್ಥಳವಿಶಿಷ್ಟವಾದ ಮರಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಗುವುದು ಕಂಡುಬರುತ್ತದೆ. ಸ್ಥಳವಿಶಿಷ್ಟವೆಂದು ಪರಿಗಣಿಸಲಾದ ೩೧೮ ಜಾತಿಯ ಮರಗಳ ಪೈಕಿ ಶೇ.೮೫ ಮರಗಳು ಗರಿಷ್ಟ ೮ ರಿಂದ ೧೦ ತಿಂಗಳು ಮಳೆ ಬೀಳುವ ಪ್ರದೇಶದಲ್ಲೇ ಕಂಡು ಬರುತ್ತವೆ. ಉತ್ತರಕ್ಕೆ ಚಲಿಸಿದಂತೆ ಈ ಪ್ರಮಾಣ ಕಡಿಮೆಯಾಗುವುದು. ಎತ್ತರದ ಪ್ರದೇಶಗಳಲ್ಲಿ ಹೆಚ್ಚು ಸೂಕ್ಷ್ಮವಾದ ಹೈಗ್ರೋಫಿಲಸ್ (ತೇವಯುಕ್ತ ಪ್ರದೇಶದಲ್ಲಿ ಬೆಳೆಯುವ ಸಸ್ಯಗಳು) ಪ್ರಭೇದದ ಮರಗಳು ಕೆಲವೇ ಸ್ಥಳಗಳಲ್ಲಿ ಮಾತ್ರವೇ ಕಂಡುಬರುತ್ತವೆ.

ಪಶ್ಚಿಮ ಘಟ್ಟ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದ ಸ್ಥಳವಿಶಿಷ್ಟತೆಯುಳ್ಳ ಜೀವವೈವಿಧ್ಯವು ಸಾಧ್ಯವಾಗಿರುವುದು ತೇವಾಂಶಭರಿತ ಉಷ್ಣವಲಯ, ಅಲ್ಲಿನ ಭೂಸ್ವರೂಪ, ಭೂಲಕ್ಷಣ, ಪಶ್ಚಿಮಕ್ಕೆ ಅರಬ್ಬೀ ಸಮುದ್ರ ಮತ್ತು ಉತ್ತರಕ್ಕೆ ಅರೆ ಒಣಪ್ರದೇಶದ ಡೆಕ್ಕನ್ ಪ್ರಸ್ಥಭೂಮಿ ಇರುವ ಕಾರಣಗಳಿಂದಾಗಿ. ಉತ್ಪಾದಕತೆ, ಆದಾಯ ಸೃಷ್ಟಿ, ಉದ್ಯೋಗ ಸೃಷ್ಟಿ ಮತ್ತು ಜೀವನಾಧಾರದ ದೃಷ್ಟಿಯಿಂದ ಈ ಸೂಕ್ಷ್ಮವಾದ ಜೀವಿವಲಯವು ಮನುಷ್ಯನ ಅಸ್ಥಿತ್ವಕ್ಕೆ ಬಹು ಮುಖ್ಯ. ಅರಣ್ಯಗಳ

ಉತ್ಪನ್ನ ಮತ್ತು ಅದರ ಇತರ ಜೀವಪೂರಕ ಪ್ರಯೋಜನೆಗಳನ್ನು ಸಕಲ ದೃಷ್ಟಿಯಿಂದಲೂ ಸಮಗ್ರವಾಗಿ ಪರಿಗಣಿಸಿ ಒಂದು ಹೆಕ್ಟೇರ್‌ಗೆ ವರ್ಷವೊಂದಕ್ಕೆ ೨ ಲಕ್ಷದಿಂದ ೧೦ ಲಕ್ಷ ರೂ.ಗಳವರೆಗೆ ಬೆಲೆ ನಿಗದಿ ಮಾಡಬಹುದು. ಜೀವಾವಾರಗಳ ಸಂರಕ್ಷಣೆ, ಪುನಶ್ಚೇತನಕಾರ್ಯಗಳಿಗಾಗಿ ಸುಸ್ಥಿರ ಅಭಿವೃದ್ಧಿ ನೀತಿಗಳನ್ನು, ಆದ್ಯತೆಗಳನ್ನು ರೂಪಿಸಿ ಅವುಗಳನ್ನು ಸಮರ್ಥಿಸುವುದಕ್ಕಾಗಿ ಜೀವಾವಾರದ ಬೆಲೆನಿಗದಿ ಮಾಡುವುದು ಮುಖ್ಯವಾಗುತ್ತದೆ. ವಿವೇಕಯುತವಾದ ಜೀವಾವಾರ ಬೆಲೆ ನಿಗದಿಯ ವ್ಯವಸ್ಥೆ ಆಗದಿದ್ದ ಪಕ್ಷದಲ್ಲಿ ಪಾರಿಸರಿಕ ವಿನಾಶದ ದುಷ್ಕೃತ್ಯಗಳಿಗೆ ಸಹಾಯಕವಾಗುವ ರೀತಿಯ ನೀತಿ ನಿರೂಪಣೆಗಳಿಗೆ, ಒಟ್ಟಾರೆ ಸಾಮಾಜಿಕ ಹಿತದ ಅವಗಣನೆಗೆ ದಾರಿಯಾಗಬಹುದು. ಭೂಪ್ರದೇಶಗಳ ನಿರ್ವಹಣೆಯ ಸಂದರ್ಭಗಳಲ್ಲಿ ಜೀವಪರಿಸ್ಥಿತಿಯನ್ನು, ಜಲಪರಿಸ್ಥಿತಿಯನ್ನು, ಒಟ್ಟಾರೆ ಆ ವಾತಾವರಣವನ್ನು ಆರ್ಥಿಕವಾದ ಮತ್ತು ಸಮಾಜಿಕವಾದ ದೃಷ್ಟಿಕೋನದೊಂದಿಗೆ ಸುಸ್ಥಿರವಾದ ರೀತಿಯಲ್ಲಿ ನಿರ್ವಹಿಸ ಬೇಕಾದ ಅನಿವಾರ್ಯತೆ ಈಗ ಉಂಟಾಗಿದೆ...

ಮಿತಿಯಿಲ್ಲದ, ಅನಿಯಂತ್ರಿತ ಸಂಪನ್ಮೂಲಗಳ ಸೂರೆ ಮತ್ತು ಯಾವುದೇ ಯೋಜನೆ ಇಲ್ಲದ ಅಭಿವೃದ್ಧಿ ಕಾರ್ಯಕ್ರಮಗಳು ಒಟ್ಟಾಗಿ, ಸಂಪನ್ಮೂಲಗಳ ಲಭ್ಯತೆ ಮತ್ತು ಜೀವವೈವಿಧ್ಯತೆಯ ಮೇಲೆ ಅತಿಯಾದ ಒತ್ತಡವನ್ನು ಉಂಟುಮಾಡುತ್ತಿದ್ದು, ಇದು ಬೋಳಾದ ಬೆಟ್ಟಗಳ ನೆತ್ತಿಗಳು ಹಾಗೂ ನದಿಗಳಲ್ಲಿ, ತೊರೆಗಳಲ್ಲಿ ಹರಿಯುವ ನೀರಿನ ಪ್ರಮಾಣ ಮತ್ತು ಹರಿವಿನ ಅವಧಿ ಇವುಗಳ ಕೊರತೆಯ ರೂಪದಲ್ಲಿ ವ್ಯಕ್ತವಾಗುತ್ತಿದೆ. ಉದಾ : ಸ್ಥಳೀಯ ಸಸ್ಯಪ್ರಭೇಧಗಳು ಪ್ರಧಾನವಾಗಿ ಕಂಡುಬರುವ ಎಡೆಗಳಲ್ಲಿ(ಶೇ. ೫೫ಕ್ಕೂ ಹೆಚ್ಚು) ತೊರೆಗಳಲ್ಲಿ ನೀರಿನ ಹರಿವು ನಿರಂತರವಾಗಿದ್ದರೆ, ಈ ಬಗೆಯ ಸ್ಥಳೀಯ ಸಸ್ಯ ಪ್ರಭೇಧಗಳು ಕಡಿಮೆ ಇದ್ದಾಗ (ಶೇ. ೩೫ಕ್ಕೂ ಕಡಿಮೆ) ತೊರೆಗಳಲ್ಲಿ ನೀರಿನ ಹರಿವು ಏರುಪೇರಾಗುತ್ತದೆ. ಇದರಿಂದ ಸ್ಥಳೀಯ ಸಸ್ಯ ಪ್ರಭೇಧಗಳ ಹಸಿರುಹೊದಿಕೆಯನ್ನು ಕಾಪಾಡುವುದು, ಜಲಾನಯನ ಪ್ರದೇಶವನ್ನು ಕಾಪಾಡುವ ಮೂಲಕ ಜನರ ಜೀವನಾಧಾರವನ್ನು ಕಾಪಾಡುವ ದೃಷ್ಟಿಯಿಂದ ಎಷ್ಟು ಮುಖ್ಯ ಎಂಬುದು ಸ್ಪಷ್ಟವಾಗುತ್ತದೆ. ಜಲಾನಯನ ಪ್ರದೇಶದಲ್ಲಿ ಸ್ಥಳೀಯ ಸಸ್ಯಪ್ರಭೇಧಗಳ ಹೊದಿಕೆಯಿದ್ದಾಗ ಆ ಭೂಪ್ರದೇಶದ ನೀರನ್ನು ಹಿಡಿದಿಡುವ ಶಕ್ತಿಯು ಹೆಚ್ಚುತ್ತದೆ. ಇದರಿಂದ ತೊರೆಗಳಲ್ಲಿ ನೀರು ಎಲ್ಲಾ ಕಾಲದಲ್ಲೂ ಹರಿಯುವ ಸಾಧ್ಯತೆ ಹೆಚ್ಚುತ್ತದೆ. ಉಷ್ಣಪ್ರದೇಶಗಳ ಕಾಡುಗಳಲ್ಲಿಯ ಭೂಮಿಯ ದುರ್ಬಳಕೆಯ ಪ್ರಭಾವ ತೊರೆಗಳಲ್ಲಿನ ಶುಷ್ಕಕಾಲದ ಹರಿವಿನ ಮೇಲೆ ಆಗುತ್ತದೆಂಬುದು ಸುಸ್ಪಷ್ಟ, ಏಕೆಂದರೆ ನೀರನ್ನು ಇಂಗಿಸಿಕೊಳ್ಳುವ ಕಾಡಿನ ಗುಣದಲ್ಲಿ ಹರಿದು ಹೋಗುವ ನೀರನ್ನು ಮತ್ತು ಇಂಗುವ ನೀರನ್ನು ವಿಭಾಗಿಸಿಕೊಳ್ಳುವ ಶಕ್ತಿ ಅಂತರ್ಗತವಾಗಿರುತ್ತದೆ. ವಾಯುವಿನ ಗುಣಮಟ್ಟದ ಸುಧಾರಣೆ, ಕಲ್ಮಶಗಳ ಶುದ್ಧೀಕರಣ, ಹೂಳು ತಡೆ, ಭೂಕುಸಿತ ಪ್ರತಿರೋಧ ಮುಂತಾದುವು ಸ್ಥಳೀಯ ಸಸ್ಯ ಸಂಕುಲವನ್ನು ಕಾಪಾಡುವುದರಿಂದ ಆಗುವ ಇತರ ಲಾಭಗಳು.

ಸೂಕ್ಷ್ಮವಾದ ಜೀವಿಪರಿಸರವನ್ನು ಕೆಟ್ಟ ರೀತಿಯಲ್ಲಿ ನಿರ್ವಹಿಸುವುದರಿಂದ ಉಂಟಾಗುವ ಗಂಭೀರ ಪರಿಣಾಮಗಳು ಇತ್ತೀಚಿನ ಕೇರಳ ಮತ್ತು ಕೊಡಗುಗಳಲ್ಲಿ ಉಂಟಾದ ವಿಪತ್ತುಗಳಿಂದ ಸ್ಪಷ್ಟವಾಗಿದೆ. ಈ ಪ್ರದೇಶಗಳಲ್ಲಿ ಉಂಟಾದ ವಿಪತ್ತುಗಳಿಗೆ ಕಾಡುನಾಶವೇ (ಕಳೆದ ಐದು ದಶಕಗಳಲ್ಲಿ ಕೇರಳದಲ್ಲಿ ಶೇ. ೩೬ ಮತ್ತು ಕೊಡಗಿನಲ್ಲಿ ಶೇ. ೨೪ ಹಸಿರು ಹೊದಿಕೆ ನಾಶವಾಗಿದೆ.) ಹೀಗೆ ಕಾರಣವಾಗಿದೆ: (೧) ಕಾಡಿನ ನೀರು ಹಿಡಿದಿಡುವ ಸಾಮರ್ಥ್ಯದ ನಾಶದಿಂದ ಉಂಟಾಗಿರುವ ಪ್ರವಾಹ, (೨.) ಸಾಕಷ್ಟು ನೀರು ಇಂಗದೆ ಇರುವುದರಿಂದ ತೊರೆಗಳು ಒಣಗಿರುವುದು ಮತ್ತು ಅಂತರ್ಜಲದ ಮಟ್ಟದಲ್ಲಿ ಕುಸಿತ, ಸ್ಥಳೀಯ ಸಸ್ಯಪ್ರಭೇಧಗಳ ನಾಶದಿಂದಾಗಿ ಭೂ ಕುಸಿತ ಈ ಪ್ರದೇಶಗಳು ಅಭಿವೃದ್ಧಿಯಾಗಬೇಕೆಂಬುದು ನಿಜ ಆದರೆ ಈ ಅಭಿವೃದ್ಧಿಗೆ ತೆರಬೇಕಾದ ಬೆಲೆ ಪ್ರಾಕೃತಿಕ ಸಂಪನ್ಮೂಲಗಳ ನಾಶವಲ್ಲ. ಭೂಮಿಯ ತಾಳಿಕೆಯ ಸಾಮರ್ಥ್ಯವನ್ನು ನಾಶಮಾಡುವುದು ಅಭಿವೃದ್ಧಿಯಲ್ಲ. ಅಹಂಕಾರಿಗಳಾದ ಮತ್ತು ತಿಳುವಳಿಕೆಯ ಕೊರತೆಯುಳ್ಳ ನೀತಿ ರೂಪಿಸುವ ಜನ ಜಲಸಂಪತ್ತನ್ನು ಕಾಪಾಡುವುದಕ್ಕಾಗಿ ಜಲಾನಯನದ ಪ್ರಾಮುಖ್ಯತೆಯನ್ನು ಅರಿಯಬೇಕಾದುದು ಬಹಳ ಮುಖ್ಯ.

ನೀರನ್ನು ಹಿಡಿದಿಡುವ ಭೂಮಿಯ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ಜಲಾನಯನ ಪ್ರದೇಶಗಳಲ್ಲಿ ಸ್ಥಳೀಯ ಸಸ್ಯ ಪ್ರಭೇಧಗಳನ್ನು ಹೆಚ್ಚಿಸಿ ಹಸಿರು ಹೊದಿಕೆ ನಿರ್ಮಿಸುವುದು, ಆ ಮೂಲಕ ನೀರಿನ ಸ್ಥಿರತೆ, ಭೂಸವಕಳಿಯನ್ನು ತಡೆಯುವುದು, ಹೂಳಿನ ಸಮಸ್ಯೆಯನ್ನು ತಡೆಗಟ್ಟುವುದು, ಇಂಗಾಲವನ್ನು ನಿರ್ವಹಿಸುವುದು ಮತ್ತು ಭೂಕುಸಿತ ಹಾಗೂ ಪ್ರವಾಹದ ಸಂದರ್ಭಗಳನ್ನು ಕಡಿಮೆ ಮಾಡುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ.

ನಿರಂತರ ನೀರಿನ ಹರಿವಿರುವ ಜೀವಿಪರಿಸರದ, ಪಶ್ಚಿಮ ಘಟ್ಟಗಳಿಗೆ ವಿಶಿಷ್ಟವಾದ ಸಸ್ಯಗಳು ಮತ್ತು ಅಳಿದುಳಿದಿರುವ (relic species) ಸಸ್ಯಗಳ ಬಗ್ಗೆ ನೀತಿ ನಿರ್ಮಾಪಕರು ತೀವ್ರಗಮನ ಹರಿಸಬೇಕಾದ ಅಗತ್ಯವಿದೆ.

ನೀರು ಹರಿಯುವ ಎಡೆಗಳಲ್ಲಿ ಬೆಳೆಯುವ ಕಾಡುಗಳು ವಿಶೇಷ ತಳಿಯ ಮರಗಳನ್ನು ಹೊಂದಿದ್ದು ಅವಕ್ಕೆ ಅತಿ ಹೆಚ್ಚಿನ ಮಟ್ಟದಲ್ಲಿ ಜೈವಿಕ ದ್ರವ್ಯ (bio-mass) ಉತ್ಪಾದಿಸುವ ಸಾಮರ್ಥ್ಯ ಮತ್ತು ಇಂಗಾಲವನ್ನು ದೂರವಿರಿಸುವ (carbon sequestration) ಸಾಮರ್ಥ್ಯ ಸಹ ಇರುತ್ತದೆಯಾದ್ದರಿಂದ ಮತ್ತು ಅವು ಕಾಡುಗಳ ಜಲಾನಯನತೆಯನ್ನು ಉತ್ತಮಪಡಿಸುವುದರಿಂದ ಆ ಕಾಡುಗಳನ್ನು ಉಳಿಸುವ ದೃಷ್ಟಿಯಿಂದ ವಿಶೇಷವಾದ ಅರಣ್ಯ ನಿರ್ವಹಣೆಯ ನೀತಿಗಳನ್ನು ರೂಪಿಸಬೇಕಾದ ಅಗತ್ಯವಿದೆ. ಪಶ್ಚಿಮ ಘಟ್ಟಗಳ ಅಸಂಖ್ಯಾತ ತೊರೆಗಳು ಇಡೀ ಭಾರತ ಪರ್ಯಾಯ ದ್ವೀಪದ ಜಲಾನಯನವನ್ನು (watershed) ರೂಪಿಸುತ್ತವೆ. ಕೋಟ್ಯಾಂತರ ಅರಣ್ಯವಾಸಿಗಳು ಮತ್ತು ಬಡರೈತರು ವಿವೇಕಯುತ ನೀರಿನ ಬಳಕೆ ಮತ್ತು ಜಲಾನಯನ ಸಸ್ಯ ಸಂಪತ್ತನ್ನು ಉಳಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ನೀತಿಗಳನ್ನು ರೂಪಿಸುವ ಮಟ್ಟದಲ್ಲಿ ಪಾಲುದಾರರಾಗಬೇಕು.

ಅತಿ ಹೆಚ್ಚು ಮಾನವ ಚಟುವಟಿಕೆ ಇರುವ ಜೀವವೈವಿಧ್ಯತೆಯ ಪ್ರಮುಖ ತಾಣಗಳಲ್ಲಿ ಆದಿವಾಸಿಗಳನ್ನು ಮತ್ತು ಸಣ್ಣ ರೈತರನ್ನು ಜಲಾನಯನ ಪ್ರದೇಶದ ಕಾಡುಗಳ ಪೋಷಕರನ್ನಾಗಿ ಮತ್ತು ಕೃಷಿಗಾಗಿ ನೀರನ್ನು ನಿಯಂತ್ರಿತ ರೀತಿಯಲ್ಲಿ ಬಳಸುವ ವಿಚಾರದಲ್ಲಿ ಪಾಲುದಾರರನ್ನಾಗಿ ಮಾಡಬೇಕು. ಈ ಕ್ರಮಗಳಿಂದ ಜೀವವೈವಿಧ್ಯತೆಯನ್ನು ಕಾಪಾಡುವ, ಜಾಗತಿಕ ಹವಾಮಾನ ಬದಲಾವಣೆಯನ್ನು ತಡೆಯುವ, ಸ್ಥಳೀಯ ಜನರ ಜೀವನ ಮಟ್ಟವನ್ನು ಉತ್ತಮಪಡಿಸುವ ಕೆಲಸಗಳು ಸಾಧ್ಯವಾಗುವುದು. ಸದಾಕಾಲ ತೊರೆಗಳು ಹರಿಯುವಂತೆ ಮಾಡಲು ಉಳಿದಿರುವ ನಿತ್ಯಹರಿದ್ವರ್ಣ ಕಾಡುಗಳನ್ನು ಮತ್ತು ಅರೆ ಹರಿದ್ವರ್ಣ ಕಾಡುಗಳನ್ನು ಉಳಿಸುವುದು ಪ್ರಧಾನ ಕಾಳಜಿಯಾಗಬೇಕು. ಸೂಕ್ತವಾದ ನಿರ್ವಹಣಾ ತಂತ್ರಗಳ ಮೂಲಕ ಇದು ಇನ್ನೂ ಸಾಧ್ಯವಿದೆ.

ಈ ವಿಚಾರದಲ್ಲಿ ಅಭಿವೃದ್ಧಿಯ ಯೋಜಕರಿಗೆ ಜೀವಿಪರಿಸರ ಎಂದರೇನು ಎಂಬುದರ ಪರಿಪೂರ್ಣ ಮತ್ತು ಸಮಗ್ರ ಗ್ರಹಿಕೆ ಅಗತ್ಯ. ಜೀವಿಪರಿಸರ ಸಂರಕ್ಷಣೆ ಎಂಬುದು ಭೂಮಿಮತ್ತು ನೀರುಗಳಂತಹ ಜೀವಂತ ಸಂಪನ್ಮೂಲಗಳ ಸಮಗ್ರ ನಿರ್ವಹಣೆ, ಒಂದು ನಿಷ್ಪಕ್ಷವಾದ ರೀತಿಯ ಧೋರಣೆ ಮತ್ತು ಸುಸ್ಥಿರ ಬಳಕೆಯ ವಿಧಾನಗಳನ್ನು ಒಳಗೊಳ್ಳುತ್ತದೆ. ಸ್ಥಿರವಾದ ಅಭಿವೃದ್ಧಿಯ ಮಾರ್ಗವು ಜೀವಿಪರಿಸರ ನಿಯಮಗಳನ್ನು ಅವಲಂಬಿಸಿರುವ ಒಂದು ವಿನ್ಯಾಸವನ್ನು ಒಳಗೊಂಡಿರುತ್ತದೆ. ಈ ನಿಯಮಗಳು ಸಾಮಾಜಿಕವಾಗಿ ಒಳಗೊಳ್ಳುವಂತಹವೂ ಮತ್ತು ಒಂದು ಸಾಮರಸ್ಯವುಳ್ಳ ಪರಿಸರದ ಒಳಗೆ ಬದುಕುವ ಬಹುಮುಖಿ ಸುಸ್ಥಿರ ಮಾನವ ಸಮುದಾಯಗಳ ಬಗ್ಗೆ ಸೂಕ್ಷ್ಮಗ್ರಾಹಿಯೂ ಆಗಿರುತ್ತವೆ. ಬರೀ ಜಿ.ಡಿ.ಪಿ.ಯ ಲೆಕ್ಕಾಚಾರದ ಬಿಸಿಲುಗುದುರೆಯನ್ನು ಬೆನ್ನು ಹತ್ತುವ ಅಭಿವೃದ್ಧಿಯು ಜವಾಬ್ದಾರಿರಹಿತ ನೀರು ಮತ್ತು ಮರಮುಟ್ಟು ಲಾಬಿಗೆ ಅನುಕೂಲಕರವಾಗಿರುತ್ತದೆ ಮತ್ತು ಭಾರತ ಪರ್ಯಾಯ ದ್ವೀಪದ ನೀರು ಮತ್ತು ಆಹಾರದ ತಾಳಿಕೆಯನ್ನು ಹಾಳುಗೆಡವುತ್ತದೆ



**(ಡಾ.ಟಿ.ವಿ. ರಾಮಚಂದ್ರ ಅವರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿನ ಪರಿಸರ ವಿಜ್ಞಾನ ಕೇಂದ್ರದ ಅಧ್ಯಯನಗಳ ಸಮನ್ವಯಕಾರರಾಗಿದ್ದಾರೆ)**

**(ಕನ್ನಡಕ್ಕೆ : ಎಂ. ರಾಜು)**


**ಚಂದಾದಾರರಾಗಲು ಬಯಸುಯವವರಿಗೆ ಸೂಚನೆ**

**ಹೊಸ ಮನುಷ್ಯ'ಕ್ಕೆ ಚಂದಾದಾರರಾಗ ಬಯಸುವವರು ಪತ್ರಿಕೆಯ ಮುಖಪುಟದಲ್ಲಿರುವ ಪತ್ರಿಕೆಯ ವಿಳಾಸಕ್ಕೆ ಸಂಪಾದಕರ ಹೆಸರಿನಲ್ಲಿ ಬರೆದ ಚೆಕ್/ಡಿಡಿ ಕಳಿಸಬಹುದು. ಅಥವಾ ಸಂಪಾದಕರು, ಹೊಸ ಮನುಷ್ಯ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೀತಾಕೃಪಾ ಶಾಖೆಯಲ್ಲಿರುವ (ifsc code: sbin 0040444) ಚಾಲ್ತಿ ಖಾತೆ ಸಂಖ್ಯೆ 64110358330 ಇಲ್ಲಿಗೆ ನೆಫ್ಟ್ ಮೂಲಕ ಚಂದಾ ಮೊತ್ತವನ್ನು (ರೂ. 170/–) ವರ್ಗಾವಣೆ ಮಾಡಿ (ನಗದು ಕಟ್ಟುವುದು ಮಾತ್ರ ಬೇಡ) 9449242284 ಈ ಸಂಖ್ಯೆಗೆ ಖಚಿತಪಡಿಸಿ ತಮ್ಮ ವಿಳಾಸ ಕಳಿಸಬೇಕು.–ಸಂ.**

**ಎಂಟನೇ ವರ್ಷಕ್ಕೆ 'ಹೊಸ ಮನುಷ್ಯ'**


# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಫೆಬ್ರುವರಿ, ೨೦೧೯** **ಸಂಪಾದಕ : ಡಿ.ಎಸ್.ನಾಗಭೂಷಣ** **ಸಂಪುಟ: ೮ ಸಂಚಿಕೆ: ೧**

**ಚಂದಾ ರೂ. ೧೭೦/– (ಜನವರಿಯಿಂದ ಸೆಪ್ಟಂಬರ್‌ವರೆಗೆ) ರೂ. ೨೫೦/–(ಸಂಸ್ಥೆಗಳಿಗೆ)** **ಬೆಲೆ:** ಬಿಡಿ ಪ್ರತಿ: ರೂ. ೨೦/– ಪುಟ: **೨೦**



**ವಿಳಾಸ:** ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೭ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಲೋಕಸಭಾ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಒಂದಾದ ಮೇಲೊಂದರಂತೆ ಅನಿರೀಕ್ಷಿತ ಮತ್ತು ಆಶ್ಚರ್ಯಕರ ಬೆಳವಣಿಗೆಗಳು ಕಾಣಿಸತೊಡಗಿವೆ. ಅವುಗಳಲ್ಲಿ ಬಹು ಮುಖ್ಯವಾದದ್ದು, ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿನ ಮೀಸಲಾತಿ ವ್ಯಾಪ್ತಿಯ ಹೊರಗಿದ್ದ ಜನಸಮುದಾಯಗಳಿಗೆ, ನೇರವಾಗಿ ಹೇಳುವುದಾದರೆ ಮೇಲ್ಜಾತಿ ಸಮುದಾಯಗಳಿಗೆ ಕೇಂದ್ರ ಸರ್ಕಾರ ಶೇ. ೧೦ರಷ್ಟು ಮೀಸಲಾತಿ ಒದಗಿಸಿರುವುದು. ಸರ್ಕಾರದ ಈ ಕ್ರಮ ಎರಡು ದೃಷ್ಟಿಗಳಿಂದ ಅನುಮಾನಾಸ್ಪದವೆನಿಸಿದ್ದು, ಮೀಸಲಾತಿ ಎಂಬ ತತ್ವವನ್ನೇ ಅಣಕಿಸಿ ಅಪ್ರಸ್ತುತ ಮಾಡುವ ದುರುದ್ದೇಶವನ್ನೂ ಇದು ತನ್ನೊಳಗೆ ಅಡಗಿಸಿಕೊಂಡಂತಿದೆ. ಮೊದಲಾಗಿ ಕೇಂದ್ರ ಸರ್ಕಾರ ಇದನ್ನು ತಾನು ಅಧಿಕಾರಕ್ಕೆ ಬಂದ ನಾಲ್ಕು ವರ್ಷಗಳಲ್ಲಿ ಮಾಡದಿದ್ದುದನ್ನು ಈಗ ಮಾಡಹೊರಟಿರುವುದು–ಅದೂ ಈ ಕಾಯಿದೆ ಈ ಹಿಂದಿನ ಹಲವು ಇಂತಹುದೇ ರಾಜಕೀಯ ಲಾಭೋದ್ದೇಶದ ಅವಸರದ ಪ್ರಯತ್ನಗಳು ವಿಫಲವಾದ ಅನುಭವಗಳ ಹಿನ್ನೆಲೆಯಲ್ಲಿ ಮತ್ತು ಇದು ಸಂವಿಧಾನದ ತಾತ್ವಿಕ ಅಡಿಗಲ್ಲನ್ನೇ ಅಲ್ಲಾಡಿಸುವಂತಿರುವ ಕಾರಣದಿಂದಾಗಿ ನ್ಯಾಯಾಂಗ ಪರೀಕ್ಷೆಯಲ್ಲಿ ಗೆಲ್ಲುವುದಿಲ್ಲ ಎಂದು ಗೊತ್ತಿದ್ದೂ ಈ ಕಾಯಿದೆಯನ್ನು ದಾಖಲೆ ಸಮಯದಲ್ಲಿ ಜಾರಿಗೆ ತಂದಿರುವುದೇಕೆ ಎಂಬ ಪ್ರಶ್ನೆ. ಇತ್ತೀಚಿನ ಮೂರು ರಾಜ್ಯಗಳ ವಿಧಾನ ಸಭಾ ಚುನಾವಣೆಗಳ ಸೋಲು ಲೋಕಸಭಾ ಚುನಾವಣೆಗಳಲ್ಲೂ ಮುಂದುವರಿಯಬಹುದೆಂಬ ಭೀತಿ ಎಂಬುದೇ ಇದಕ್ಕೆ ಸ್ಪಷ್ಟ ಉತ್ತರ. ಸರ್ಕಾರ ತನ್ನ ಈ ಕ್ರಮ ಕುರಿತ ನ್ಯಾಯಾಂಗ ಪರೀಕ್ಷೆಯ ವಿಧಿ–ವಿಧಾನಗಳೆಲ್ಲ ಪೂರ್ಣವಾಗುವ ಹೊತ್ತಿಗೆ ಚುನಾವಣೆಗಳು ಮುಗಿದು ತನಗೆ ಬರಬಹುದಾದ ರಾಜಕೀಯ ಲಾಭ ಬಂದಿರುತ್ತದೆ ಎಂದು ಲೆಕ್ಕ ಮಾಡಿಯೇ ಜನಗಳಿಗೆ ಈ ಟೋಪಿ ಹಾಕಿದಂತಿದೆ.

ಆದರೆ ದುರಂತವೆಂದರೆ ಕಾಂಗ್ರೆಸ್ ಸೇರಿದಂತೆ ಬಹುತೇಕ ವಿರೋಧ ಪಕ್ಷಗಳು ಮೇಲ್ಜಾತಿಗಳ ಮತ ಕಳೆದುಕೊಳ್ಳುವ ಆತಂಕದಲ್ಲಿ ಸರ್ಕಾರದ ಈ ಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿವೆ. ಹೀಗೆ ನಮ್ಮ ಇಡೀ ರಾಜಕೀಯ ವ್ಯವಸ್ಥೆಯೇ ಸಂವಿಧಾನದಲ್ಲಿನ ರಾಷ್ಟ್ರಾಭಿವೃದ್ಧಿಯ ಆಶಯಗಳಿಗೆ ಮೀಸಲಾತಿಯೇ ಹೆಬ್ಬಾಗಿಲು ಎಂಬಂತೆ ನಮ್ಮ ಸಮಾಜವನ್ನು ಜಾತಿ ಚರಂಡಿಯನ್ನಾಗಿ ಮಾಡಿ ಸಂವಿಧಾನದ ಘನ ಉದ್ದೇಶವನ್ನೇ ಕುಬ್ಜಗೊಳಿಸಹೊರಟಿದೆ ಎಂದೇ ಹೇಳಬೇಕು. ಅದೇನೇ ಇರಲಿ, ಈ ಮೀಸಲಾತಿ ಉಪಕ್ರಮವು ವಿದೇಶಿ ಬ್ಯಾಂಕುಗಳಲ್ಲಿನ ಭಾರತೀಯರ ಕಪ್ಪು ಹಣ ತಂದೊಪ್ಪಿಸುವೆ ಎಂಬ ಘೋಷಣೆಯಿಂದ ಹಿಡಿದು, ನೋಟು ರದ್ದತಿ ಸೇರಿದಂತೆ ಮೋದಿ ತಾವು ಏನಲ್ಲದಿದ್ದರೂ ಬಹು ದೊಡ್ಡ ಸ್ಟಂಟ್ ಮಾಸ್ಟರ್ ಎಂಬುದನ್ನು ಸಾಬೀತುಪಡಿಸಿದ್ದಾರೆ

ಇದೇ ಸ್ಟಂಟ್, ಮತ್ತೆ ಸಂವಿಧಾನವನ್ನೇ ಉಲ್ಲಂಘಿಸುವ ಹೊಸ ಭಾರತೀಯ ಪೌರತ್ವ ಕಾಯಿದೆಯಲ್ಲಿ ಪುನರಾವರ್ತನೆಗೊಂಡಿದೆ. ಈ ಕಾಯಿದೆ ಪ್ರಕಾರ ನೆರೆಯ ಮೂರು ರಾಷ್ಟ್ರಗಳ ಮುಸ್ಲಿಮೇತರ ವಲಸೆಗಾರರಿಗೆ ಭಾರತೀಯ ಪ್ರಜೆತ್ವ ನೀಡಬಹುದು. ಇದು ಧರ್ಮದ ಆಧಾರದ ತಾರತಮ್ಯವನ್ನು ಒಪ್ಪದ ನಮ್ಮ ಸಂವಿಧಾನಕ್ಕೇ ಹೊಡೆದ ಸೆಡ್ಡಲ್ಲದೆ ಮತ್ತೇನಲ್ಲ. ಇದರಿಂದ ಆಕ್ರಮಣಕಾರಿ ಬಂಗಾಳಿ ಭಾಷಿಕ ಹಿಂದೂಗಳ ವಲಸೆಯಿಂದ ತಮ್ಮ ಅಸ್ಸಾಮೀ ಭಾಷೆಗೆ, ಸಂಸ್ಕೃತಿಗೆ ಬೆದರಿಕೆ ಉಂಟಾಗಿದೆ ಎಂದು ಅಸ್ಸಾಂನ ಎಲ್ಲ ಧಾರ್ಮಿಕ ಸಮುದಾಯದವರೂ ಒಟ್ಟಿಗೆ ಸೇರಿ ಚಳುವಳಿ ಆರಂಭಿಸಿದ್ದಾರೆ, ಹಿಂದುತ್ವ ರಾಜಕಾರಣದ ಭಾಗವಾಗಿ ಬಿಟ್ಟ ಬಾಣ ತನ್ನೆಡೆಗೇ ತಿರುಗುತ್ತಿರುವುದನ್ನು ಕಂಡ ಮೋದಿ ಸರ್ಕಾರ ಈಗ ಸಂಗೀತಗಾರ ಭೂಪೇನ್ ಹಜಾರಿಕಾಗೆ, ಅವರು ಕೊನೆಯುಸಿರೆಳೆದ ಎಂಟು ವರ್ಷಗಳ ನಂತರ 'ಭಾರತ ರತ್ನ' ನೀಡಿ ಅಸ್ಸಾಮೀ ಜನರನ್ನು ಸಂತುಷ್ಟಗೊಳಿಸ ಹೊರಟಿದೆ. ಮೋದಿಯವರ ಸ್ಟಂಟ್‌ಗಳು ಯಾವುದರ ಮರ್ಯಾದೆಯನ್ನೂ ಉಳಿಸುವಂತೆ ಕಾಣುತ್ತಿಲ್ಲ. ಒಮ್ಮೆಗೇ ಮೂರು ಜನರಿಗೆ 'ಭಾರತ ರತ್ನ' ಕೊಡುವ ಉದ್ದೇಶವಾದರೂ ಏನು? ಈಗ ಈ ಬಗ್ಗೆ ದೇಶಾದ್ಯಂತ ನಡೆದಿರುವ ಚರ್ಚೆ ಇದನ್ನು ಪುಷ್ಟೀಕರಿಸುವಂತಿವೆ.

ಇನ್ನು ರಫೇಲ್ ವಿವಾದದ ವಿಚಾರಣೆಯ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಸಹಿ ಹಾಕದ ಮತ್ತು ತಪ್ಪು ಮಾಹಿತಿಯನ್ನೊಳಗೊಂಡ ಪತ್ರಗಳನ್ನು ನೀಡಿದ, ಸಿಬಿ.ಐ. ನಿರ್ದೇಶಕರ ಮೇಲಿನ ತನಿಖಾ ವರದಿಯನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳಬೇಕಾದ ಸಮಿತಿಯಲ್ಲಿನ ಹಿರಿಯ ನ್ಯಾಯಾಧೀಶರಿಗೆ ನಿವೃತ್ತಿಯ ನಂತರದ 'ಹುದ್ದೆ'ಯೊಂದರ 'ಆಮಿಶ' ಒಡ್ಡಿದ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ 'ಆಯ್ಕೆ'ಗಾಗಿ ರಚಿತವಾಗಿದ್ದ 'ಕೊಲಿಜಿಯಂ'ನ ತೀರ್ಮಾನಗಳನ್ನು ಆ ಕೊಲಿಜಿಯಂನ ಸದಸ್ಯರೊಬ್ಬರು ನಿವೃತ್ತರಾದ ನಂತರ ಬದಲಿಸಿರುವ ಪ್ರಕರಣಗಳು, ಇಲ್ಲಿ ನಿಜವಾಗಿ ಸಂವಿಧಾನಾತ್ಮಕ ಆಡಳಿತ ನಡೆಯುತ್ತಿದೆಯೇ? ಎಂಬ ಅನುಮಾನ ಹುಟ್ಟಿಸುವಂತಿವೆ. 'ಅಭಿವೃದ್ಧಿ! ಅಭಿವೃದ್ಧಿ' ಎಂದು ಕೂಗುತ್ತಾ ಅಧಿಕಾರಕ್ಕೆ ಬಂದ ಮೋದಿಯವರು' ಈಗ ಮಾಡುತ್ತಿರುವುದಾದರೂ ಏನು?

ಈ ಮೋದಿ ರಾಜಕಾರಣವನ್ನು ಎದುರಿಸಲು ನಮ್ಮ ಮಡ್ಡ ಕಾಂಗ್ರೆಸ್ಸಿಗೆ ಹೊಳೆದಿರುವುದು ಎರಡೇ ಪರಿಹಾರಗಳು : ಮೃದು ಹಿಂದುತ್ವ ಮತ್ತು ಇತ್ತೀಚೆಗೆ ಪ್ರಿಯಾಂಕಾ ಗಾಂಧಿ! ಜನರಿಗೆ ಹುಚ್ಚು ಹಿಡಿಯುವುದೊಂದೇ ಬಾಕಿ!!

ಇನ್ನು ನಮ್ಮ ರಾಜ್ಯದ ಪರಿಸ್ಥಿತಿಯ ಬಗ್ಗೆ ಮಾತಾಡಲು ಶಬ್ದಗಳೇ ಸಿಗದಂತಾಗಿದೆ. ಮಾತು ಸೋತು ಬಿದ್ದಿದೆ. ತನ್ನ ಶಾಸಕರನ್ನು ಮಂತ್ರಿ ಅಥವಾ ಸಮಾನ ಸೌಲಭ್ಯಗಳ ಸ್ಥಾನಮಾನ ನೀಡಿ ಅಥವಾ ರೆಸಾರ್ಟುಗಳಲ್ಲಿ ಮೇಯಿಕೊಂಡು ಹಾಯಿಕೊಂಡಿರುವಂತೆ ಇರಿಸಿಯೇ ಪಕ್ಷಗಳನ್ನು ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ನಮ್ಮ ರಾಜ್ಯ ರಾಜಕಾರಣಕ್ಕೆ ಒದಗಿದೆ ಎಂದರೆ, ಇರುವ ಅಥವ ಬರುವ ಸರ್ಕಾರ ಯಾವುಧೇ ಆಗಿರಲಿ ಅದು ಜನರ ಕಡೆ ಕಣ್ಣೆತ್ತಿ ನೋಡುವುದೆಂದು ಹೇಗೆ ನಿರೀಕ್ಷಿಸುವುದು? ಪ್ರಜಾಪ್ರಭುತ್ವ ಎಂದರೆ ಪ್ರಜೆಗಳ ಮೇಲಿನ ಕ್ರೂರ ವ್ಯಂಗ್ಯ ಎಂಬಂತಾಗಿ. ಇಡೀ ಕರ್ನಾಟಕ ಅನಾಥ ಸ್ಥಿತಿ ತಲುಪಿದೆ.

*** *** ***

ನಮ್ಮ ಪತ್ರಿಕೆ ಈ ಸಂಚಿಕೆಯೊಂದಿಗೆ ಏಳು ವರ್ಷಗಳನ್ನು (೮೪ ಸಂಚಿಕೆಗಳನ್ನು) ಮುಗಿಸಿ ಎಂಟನೇ ವರ್ಷಕ್ಕೆ ಕಾಲಿಡುತ್ತಿದೆ. ಪತ್ರಿಕೆ ತನ್ನ ಓದುಗರ ನಿರೀಕ್ಷೆಗಳನ್ನು ಹುಸಿಗೊಳಿಸಿಲ್ಲ ಎಂಬುದನ್ನು ಒಳಗಿನ ಪುಟದಲ್ಲಿರುವ ನಮ್ಮ ಕೆಲ ಓದುಗರ ಶುಭಾಶಯ–ಅಭಿಪಾಯ್ರಗಳೇ ಹೇಳುತ್ತಿವೆ. ಇದು ಸಾಧ್ಯವಾಗಿರುವುದು ಪತ್ರಿಕೆ ಒಂದು ಬಳಗದಂತೆ ಕೆಲಸ ಮಾಡುತ್ತಿರುವುದರಿಂದ. ಒಂದು ಕಡೆಯ ಬಳಗ ಓದುಗ ವರ್ಗವಾದರೆ ಇನ್ನೊಂದು ಕಡೆಯದು ಪತ್ರಿಕೆಯನ್ನು ಆ ವರ್ಗಕ್ಕೆ ತಲುಪಿಸುವ ನಮ್ಮ ಬಳಗ. ಇದರಲ್ಲಿ ಎಂ. ರಾಜು. ಟಿ.ಎಲ್. ರೇಖಾಂಬ ಮತ್ತು ಸವಿತಾರನ್ನು ಮುಖ್ಯವಾಗಿ ನೆನಪಿಸಿಕೊಳ್ಳಬೇಕು. ಈಗ ಸುರೇಂದ್ರ, ವಿಜಯಶ್ರೀ ಪದ್ಮಾಕ್ಷಿ ಮತ್ತು ಕೃಷ್ಣಾನಂದ ಅವರೂ ಈ ಬಳಗವನ್ನು ಸೇರಿಕೊಂಡಿದ್ದಾರೆ. ಜೊತೆಗೆ ನನ್ನ ಹಳೆಯ ಮಿತ್ರ ಹಿರಿಯ ಕಲಾವಿದ ಗುಜ್ಜಾರಪ್ಪ ಮತ್ತು ಭರವಸೆಯ ಕಲಾವಿದೆ ವಿಜಯಶ್ರೀ ಹಾಲಾಡಿ ಅವರೂ ನಮಗೆ ಸೂಕ್ತ ಚಿತ್ರಗಳನ್ನು ಬರೆದುಕೊಡುವ ಮೂಲಕ ನಮ್ಮ ಜೊತೆ ಕೈಜೋಡಿಸಿದ್ದಾರೆ. ಇನ್ನು ಕೋರಿದಾಗಲೆಲ್ಲ ಲೇಖನಗಳನ್ನು ಅನುವಾದ ಮಾಡಿಕೊಡುವ ಸಿರಾಜ್, ಅವಿನಾಶ್, ದಿವಾಕರ್ ಮುಂತಾದ ಗೆಳೆಯರನ್ನೂ ಇಲ್ಲಿ ನೆನೆಯಬೇಕು ದಯವಿಟ್ಟು ಪತ್ರಿಕೆಯ ಬಗ್ಗೆ ಬರೆಯಿರಿ.

**–ಸಂಪಾದಕ**